ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶ್ರವಣಬೆಳಗೊಳದಲ್ಲಿ ಯಾತ್ರಿ ನಿವಾಸ ನಿರ್ಮಾಣವನ್ನು ಸರ್ಕಾರ ಕೈಗೊಂಡಿದೆಯೆ;

ಆ) ಹಾಗಿದ್ದಲ್ಲಿ ಉದ್ದೇಶಿತ ಯಾತ್ರ ನಿವಾಸದಲ್ಲಿ ಎಷ್ಟು ಜನರು ತಂಗಬಹುದಾಗಿದೆ;

ಇ) ಈವರೆವಿಗೆ ಮಾಡಿರುವ ವೆಚ್ಚ ಎಷ್ಟು;

ಈ) ನಿರ್ಮಾಣ ಕಾರ್ಯವನ್ನು ಕೈಗೊಳ್ಳದೆ ಇದ್ದ ಪಕ್ಷದಲ್ಲಿ ಎಂದು ಕೈಗೊಳ್ಳಲಾಗುವುದೇ;

ಉ) ಕೇಂದ್ರದಿಂದ ಕೇಳಿರುವ ಹಣದ ಮೊತ್ತ;

ಊ) ಉದ್ದೇಶಿತ ಯಾತ್ರಿ ನಿವಾಸ ಯಾವಾಗ ಪೂರ್ಣಗೊಳ್ಳುತ್ತದೆ;

ಋ) 1993ಕ್ಕೆ ಮುನ್ನ ಪೂರ್ಣಗೊಳಿಸುವ ಬಗ್ಗೆ ಸರ್ಕಾರ ಖಾತ್ರಿ ನೀಡುತ್ತದೆಯೆ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಆದಷ್ಟು ಶೀಘ್ರದಲ್ಲಿ

ಉ) ರೂ. 50.00 (ಐವತ್ತು) ಲಕ್ಷಗಳು

ಊ) 1993ನೇ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಋ) ಹೌದು

ಸರ್ಕಾರಿ ವಾಹನಗಳನ್ನು ಖಾಸಗಿ ಕೆಲಸಗಳಿಗಾಗಿ ದುರುಪಯೋಗ ಮಾಡಿರುವುದು

255 (313) ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):-

ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ವಾಹನಗಳನ್ನು ಖಾಸಗಿ ಕೆಲಸಗಳಿಗಾಗಿ ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರಿ ವಾಹನಗಳನ್ನು ರಜಾ ದಿನಗಳಂದು ಹಾಗೂ ಇತರೆ ಖಾಸಗಿ ಉದ್ದೇಶಗಳಿಗಾಗಿ ಉಪಯೋಗಿಸುತ್ತಿರುವುದಕ್ಕೆ ತಡೆಯಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಇ) ಸರ್ಕಾರಿ ವಾಹನಗಳ ಉಪಯೋಗದ ಬಗ್ಗೆ ಅಧಿಕಾರಿಗಳಿಗೆ ಹೊಸ ನೀತಿ ಸಂಹಿತೆಯನ್ನು ಹೊರಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಇಲ್ಲ

ಆ) ರಜಾದಿನಗಳಂದು ಹಾಗೂ ಇತರೆ ಖಾಸಗಿ ಉದ್ದೇಶಗಳಿಗಾಗಿ ಸರ್ಕಾರಿ ವಾಹನಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:–

1. ಸಂತೋಷ ಕೂಟಗಳು, ವಿಹಾರ ಯಾತ್ರೆಗಳು ಹಾಗೂ ಇಂತಹ ಇತರೆ ಪ್ರವಾಸಗಳಿಗಾಗಿ ಸರ್ಕಾರಿ ವಾಹನಗಳನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ.
2. ಅಧಿಕಾರಿಗಳು ತಮ್ಮ ಕೇಂದ್ರಸ್ಥಾನದ ಪರಿಮಿತಿಯ ಹೊರಗಡೆ ಖಾಸಗಿ ಉದ್ದೇಶಗಳಿಗಾಗಿ ಸರ್ಕಾರಿ ವಾಹನಗಳನ್ನು ತೆಗೆದುಕೊಂಡು ಹೋಗುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
3. ಅತೀ ತುರ್ತು ಸಂದರ್ಭಗಳನ್ನು ಹೊರತುಪಡಿಸಿ ಸಚಿವರುಗಳ ಮತ್ತು ಸರ್ಕಾರದ ಅಧಿಕಾರಿಗಳು ಭಾನುವಾರಗಳಂದು ಸರ್ಕಾರಿ ಮೋಟಾರು ಕಾರುಗಳನ್ನು ಉಪಯೋಗಿಸಬಾರದೆಂದು ಸೂಚಿಸಲಾಗಿದೆ.

ಇ) ಈಗಾಗಲೇ ತೆಗೆದುಕೊಂಡಿರುವ ಕ್ರಮಗಳು ಸಾಕಷ್ಟು ಇದೆಯೆಂದು ಕಂಡುಬಂದಿರುವುದರಿಂದ, ಈ ಬಗ್ಗೆ ಹೊಸ ನೀತಿ ಸಂಹಿತೆಯನ್ನು ಹೊರಡಿಸುವ ಅವಶ್ಯಕತೆಯಿಲ್ಲವೆಂದು ಸರ್ಕಾರವು ಪರಿಗಣಿಸಿದೆ.

ಸೀಮೆಎಣ್ಣೆ ಮತ್ತು ಡೀಸೆಲ್ ಬೇಡಿಕೆಯ ಪ್ರಮಾಣ

251 (320) ಶ್ರೀ ಬಿ. ರಾಜುಗೌಡ (ಹನೂರು):-

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ತಿಂಗಳೊಂದಕ್ಕೆ ಸೀಮೆಎಣ್ಣೆ ಮತ್ತು ಡೀಸೆಲ್ ಬೇಡಿಕೆ ಎಷ್ಟು;

ಆ) ಇದನ್ನು ಯಾವ ಯಾವ ಸಂಸ್ಥೆಗಳು ಎಷ್ಟೆಷ್ಟು ಪೂರೈಸುತ್ತಿದೆ;

ಇ) ಇದರಿಂದ ರಾಜ್ಯ ಸರ್ಕಾರಕ್ಕೆ ಆಗುವ ಲಾಭ ಹಾಗೂ ನಷ್ಟ ಎಷ್ಟು ?

ಶ್ರೀಮತಿ ಮನೋರಮ ಮಧ್ವರಾಜ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಸೀಮೆಎಣ್ಣೆ – 67,000 ಕೆ.ಎಲ್.
ಡೀಸೆಲ್ – 1,03,903 ಮೆ.ಟನ್

ಆ) ಈ ಕೆಳಗಿನಂತೆ:–

	ಸೀಮೆಎಣ್ಣೆ	ಡೀಸೆಲ್
ಇಂಡಿಯನ್ ಆಯಿಲ್ ಕಾರ್ಪೊರೇಷನ್	30312	55423
ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್	10218	20952
ಭಾರತ ಪೆಟ್ರೋಲಿಯಂ ಕಾರ್ಪೊರೇಷನ್	6012	24805
ಇಂಡೋ ಬರ್ಮಾ ಪೆಟ್ರೋಲಿಯಂ ಕಂ.	971	2723
ಒಟ್ಟು	47513	103903

ಇ) ರಾಜ್ಯ ಸರ್ಕಾರಕ್ಕೆ ಇದರಿಂದ ಆರ್ಥಿಕವಾಗಿ ಯಾವುದೇ ಲಾಭ ಅಥವಾ ನಷ್ಟ ಆಗುತ್ತಿರುವುದಿಲ್ಲ.